
# ಅಧ್ಯಾಯ 5

**ಶ್ರೀ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ**



ಛಂದ: ಚಿತ್ತದೊಳು ವೇದಾಂತ ಜ್ಞಾನವ ನಿತ್ಯದಲಿ ನೆನೆ ನೆನೆವುತ
ಸತ್ಯಶೋಧಕರಾದ ಭಕ್ತ ಮುಮುಕ್ಷಗಳಿಗದನೀವುತ ಸಿದ್ಧಯೋಗಿಯ ತೀರ್ಥ
ಕ್ಷೇತ್ರಗಳನ್ನು ಕಾಣುತ ಪೋದನು ಬದ್ಧ
ಜ್ಞಾನಾರ್ಥಿಗಳನೆಲ್ಲರನುದ್ಧರಿಸುವವನಾದನು..

ಯಾವಾತನು ಸರ್ವ ಜೀವಿಗಳ ಪ್ರಾಣನಾಗಿಯೂ, ಅಖಿಳ ಬ್ರಹ್ಮಾಂಡವ್ಯಾಪಕ ಚೇತನನಾಗಿಯೂ, ಯಾವಾತನಿಂದ ಇಂದ್ರಿಯಗಳಿಗೆ ಜ್ಞಾನವಾಗುವುದೋ ಮತ್ತು ಯಾವಾತನನ್ನು ಇಂದ್ರಿಯಗಳು ತಿಳಿಯಲಾರವೋ, ಸರ್ವದಾ ಅಂತಃಕರಣದೊಳಗೆ ಸಾಕ್ಷಿರೂಪನಾಗಿದ್ದು, ಯಾವಾತನು ಸಮಾಧಿಯಲ್ಲಿ ಸ್ವಪ್ರಕಾಶನಾಗಿ ತೋರುವನೋ ಆತನೇ ಸರ್ವ ವೃತ್ತಿಗಳಿಗತೀತನಾಗಿದ್ದು ಸ್ವರೂಪವೆಂದೆನಿಸಿಕೊಳ್ಳುವನು. ಆತನೇ ಜಾಗ್ರದವಸ್ಥೆಯಲ್ಲಿ ಜಗರೂಪನಾಗಿದ್ದು, ಭಾಸಕನೂ ಜ್ಞಾನರೂಪನೂ ತಾನೇ ಇರುವನು. ಪ್ರಪಂಚರೂಪದಿಂದ ತನ್ನೊಳಗೆ ತಾನೇ ಆಡುತ್ತಿದ್ದು, ಆತನಲ್ಲಿ ದ್ವೈತವಾರ್ತೆಯೇ ಇಲ್ಲ. ಇಂಥಾ ಬ್ರಹ್ಮಕೇವಲನಾಗಿರುವ ಆ ಸದ್ಗುರುನಾಥನು, ಮುಮುಕ್ಷು ಜನರ ಉದ್ಧಾರಾರ್ಥವಾಗಿ ಅವತಾರವನ್ನು ಧರಿಸಿಕೊಂಡು ಸಿದ್ಧನಾಮದಿಂದ ಪೃಥ್ವಿತಲದಲ್ಲಿ ವಿಚರಿಸುವನು. ಶ್ರೋತಾ ಜನರೇ, ಈಗ ಕಥಾ ನಿರೂಪಣವನ್ನು ಕೇಳುವಂಥವರಾಗಿರಿ. ಗತಾಧ್ಯಾಯದ ಅಂತ್ಯಭಾಗದಲ್ಲಿ ಸಿದ್ಧನ ಅಧಿಕಾರವನ್ನು

ನೋಡಿ ಗಜದಂಡ ಗುರುಗಳು ಸಿದ್ಧಾರೂಢರೆಂಬ ಹೆಸರು ಕೊಟ್ಟರು. ಸಿದ್ಧಾರೂಢರನ್ನು ನೋಡಿ ಗುರುಗಳು, "ನನಗೀಗ ಜ್ಞಾನ ಪೂರ್ಣವಾಯಿತು. ಇದರ ಸಾರ್ಥಕವಾಗುವ ದೆಸೆಯಿಂದ ಇದನ್ನು ಇತರ ಮುಮುಕ್ಷುಗಳಿಗೆ ಬೋಧಿಸತಕ್ಕದ್ದು. ಅದಕ್ಕೋಸ್ಕರ ನೀನು ತೀರ್ಥಾಟನಕ್ಕೆ ಹೋಗಿ, ಅಲ್ಲಿ ಭೇಟಿಯಾಗುವ ಸಾಧು ಸಜ್ಜನರ ಕೂಡ ಆತ್ಮಚರ್ಚಾ ಮಾಡುತ್ತ ಅವರಿಗೆ ವೇದಾಂತವನ್ನು ಉಪದೇಶಿಸತಕ್ಕದ್ದು," ಎಂದು ಆಜ್ಞಾಪಿಸಿದರು. ಸಿದ್ಧಾರೂಢರು ಇದನ್ನು ಶಿರಸಾವಹಿಸಿಕೊಂಡು,ಅನಂತರ ಸದ್ಗುರು ಗಜದಂಡ ಸ್ವಾಮಿಯವರ ಆಜ್ಞೆಯನ್ನು ಪಡೆದುಕೊಂಡು ತೀರ್ಥಾಟನಕ್ಕೆ ಹೊರಟರು.ಸಂಚರಿಸುತ್ತ ಕಿಷ್ಕಂದೆಗೆ ಹೋಗಿ, ಸಿದ್ಧರಾಜರು ವಿರೂಪಾಕ್ಷನ ದರ್ಶನ ತಕ್ಕೊಂಡು, ಹೇಮಕೂಟ ಪರ್ವತವನ್ನು ಏರಿ, ಅಲ್ಲಿ ಕರಸ್ಥ ನಾಗಲಿಂಗನ ಗುಹೆಯನ್ನು ನೋಡಿ ಅವರ ಮನಸ್ಸಿಗೆ ಆನಂದವಾಯಿತು. ಅಲ್ಲಿ ಒಬ್ಬ ಸಾಧಕನು ಸಮಾಧಿ ಸ್ಥಿತಿಯನ್ನು ಸಾಧಿಸುವ ಉದ್ದಿಶ್ಯ ಏಕಾಂತದಲ್ಲಿ ಕೂತಿದ್ದನು. ಅವನು ಒಂದೊಂದೆ ಅಂಗವನ್ನು ಅನುಕ್ರಮದಿಂದ ಸಾಧಿಸಿ

ಸಪ್ತಾಂಗಯೋಗವನ್ನು ಸಾಧಿಸುತ್ತಿದ್ದನು. ಆತನ ದರ್ಶನವನ್ನು ತಕ್ಕೊಂಡು ಸಂತೋಷಪಟ್ಟು, ಕೂಡಲೇ ಸಿದ್ದರು ಪಂಪಾಕ್ಷೇತ್ರಕ್ಕೆ ಹೊರಟರು. ಪಂಪಾ ಕ್ಷೇತ್ರದಲ್ಲಿ ವಿರೂಪಾಕ್ಷೇಶ್ವರನ ದರ್ಶನ ತಕ್ಕೊಂಡು, ವಶಿಷ್ಟಾಶ್ರಮವನ್ನು ನೋಡಿ,ಅಲ್ಲಿ ಮೂರು ದಿನ ಆನಂದದಿಂದ ವಾಸಮಾಡಿ, ಅಲ್ಲಿಂದ ಗಂಧಮಾದನ ಪರ್ವತಕ್ಕೆ ಹೋಗಿ ಅದನ್ನು ನೋಡಿ, ಸ್ಪಟಿಕ ಶಿಲೆಯನ್ನು ನೋಡುವುದಕ್ಕಾಗಿ ಋಷ್ಯಾಶ್ರಮಕ್ಕೆ ಹೋದರು. ಇದು ತಪೋಭೂಮಿಯಹುದೋ ಅಲ್ಲವೋ ಎಂದು ಪರೀಕ್ಷಿಸುವುದಕ್ಕೆ ಸಿದ್ಧನಾಥನು ಒಂಭತ್ತು ದಿವಸ ಪರ್ಯಂತ ಆಹಾರವನ್ನು ತೊರೆದು ಆ ಸ್ಥಾನದಲ್ಲಿರಲು, ಕ್ಷುದ್ಬಾಧೆಯಾಗದಿದ್ದರೂ, ಮನಸ್ಸಿನಲ್ಲಿ ಸಂಶಯ ವಿಪರೀತ ಭಾವನೆಗಳು, ಲಯ ವಿಕ್ಷೇಪಾದಿ ಯೋಗ ವಿಘ್ನಗಳು ಇಲ್ಲದೆ ಚಿತ್ತವೃತ್ತಿಯು ಬ್ರಹ್ಮದಲ್ಲಿ ಧಾರಾಕಾರವಾಗಿ ಹರಿಯುವುದನ್ನೂ ನೋಡಿ, ತಪೋಭೂಮಿಯ ಲಕ್ಷಣಗಳು ಇಲ್ಲಿರುವವೆಂದು ಅನುಭವದಿಂದ ತಿಳಿದರು. ಅಲ್ಲಿಂದ ಪಂಪಾ ಸರೋವರಕ್ಕೆ ಹೋಗಿ ಅದರೊಳಗೆ ಸ್ನಾನಮಾಡಿ, ಶ್ರೀರಾಮನ ದರ್ಶನ

ತಕ್ಕೊಂಡು, ಚಕ್ರತೀರ್ಥ ವಾಲಿಭಂಡಾರಗಳನ್ನು ನೋಡಿ, ಚಿಂತಾಮಣಿ ಆಶ್ರಮಕ್ಕೆ ಬಂದರು.ಚಿಂತಾಮಣಿ ಆಶ್ರಮದಲ್ಲಿ ಅನೇಕ ಸತ್ಪುರುಷರ ಭೇಟಿಯಾದರು. ಅವರ ಕೂಡ ಸಂಭಾಷಣೆ ಮಾಡುತ್ತಿರುವಾಗ,ಸಿದ್ಧಮುನಿಗಳಿಗೆ ಒಬ್ಬನು, “ಆತ್ಮ , ಅಂದರೆ ಏನು" ಎಂದು ಕೇಳಿದನು. ಆಗ ಅವರೊಳಗೆ ಶಾಸ್ತ್ರ ಸಂಸ್ಕಾರಹೀನನಾದವನೊಬ್ಬನು “ಸರ್ವರಿಗೂ ದೇಹದಲ್ಲಿಯೇ ನಾನೆಂಬ ಬುದ್ಧಿ ಇರುವುದರಿಂದ ದೇಹವೇ ಆತ್ಮ,” ಎಂದು ಉತ್ತರ ಕೊಟ್ಟನು. ಕರ್ಮಠ ಬ್ರಾಹ್ಮಣನ ವಚನವನ್ನು ಕೇಳಿ, ಮತ್ತೊಬ್ಬನು, ಅವನಿಗೆ ಪ್ರಶ್ನೆ ಮಾಡುತ್ತಾನಲ್ಲ, "ನೀನು ದೇಹವನ್ನು ತಿಳಿದು ಅದು ತಾನೆಂದು ಹೇಳುವಿಯೋ ಅಥವಾ ಹಾಗೆ ತಿಳಿಯದೆ ದೇಹ ತಾನೆನ್ನುವಿಯೋ ದೇಹವನ್ನು ನೀನು ತಿಳಿದು ತಾನೆಂದೆನ್ನುವಿಯಾದರೆ ನೀನು ದೇಹವಾಗಲಾರಿ ತಿಳಿಯುವವನಾಗಿರುವಿ. ಹಾಗೆ ತಾನೆನ್ನುವಿಯಾದರೆ ನೀನು ದೇಹದಂತೆ ಜಡವಾಗಿದ್ದು ದೇಹ ಸಂಸ್ಕಾರಗಳ್ಯಾವವೂ ನಿನಗೆ ಸಲ್ಲಬಾರದಾಗಿತ್ತು. ಆದ್ದರಿಂದ ಯಾವ ರೀತಿಯಿಂದಲೂ ದೇಹ

ನೀನಲ್ಲ." ಇದನ್ನು ಕೇಳಿ ಆತನ ನಿರುತ್ತರನಾದನು. ಆಗ ಮೂರನೆಯವನು, "ಆತ್ಮಜ್ಞಾತ್ತಿ ಮಾತ್ರನಾದ್ದರಿಂದಅಜ್ಞಫಇರ್ಥಉಫ ಶರೀರವು ಆತ್ಮನಿಗೆ ಭಿನ್ನವಿರುವದು " ಎಂದು ನುಡಿದನು.ಆಗ ನಾಲ್ಕನೇಯವನು ಈತನಿಗೆ ವಿಚಾರಿಸುತ್ತಾನಲ್ಲ. "ಜ್ಞಪ್ತಿರೂಪ ಆತ್ಮನು ದೇಹರಹಿತನಿರುವನು. ಅವನಿಗೆ ಗಮನಾಗಮನಗಳು ಇದ್ದಾವೋ ಇಲ್ಲವೋ, ಗಮನಾಗಮನ ಇಲ್ಲವೆಂದರೆ ಅವಸ್ಥಾತ್ರಯಗಳಲ್ಲಿ ಹೋಗಿ ಬರುವುದು ಮತ್ತು ಸುಖದುಃಖಾದಿಗಳನ್ನು ಭೋಗಿಸುವುದು ಇವನಿಂದ ಹ್ಯಾಗಾದೀತು ? ಆತ್ಮನಿಗೆ ಗಮನಾಗಮನಾದಿಗಳು ಸ್ವೀಕರಿಸಿದಲ್ಲಿ, ಆತನು ವಾಯುವಿನಂತೆ ಜಡವೆನ್ನಬೇಕಾಗುವದು.ಆದರೆ ವಾಯುವಿಗೆ ಸುಖದುಃಖಗಳು ತಿಳಿಯುವುದಿಲ್ಲವೆಂದರೆ ಅವನ್ನು ತಿಳಿಯುವ ಮನಸ್ಸೇ ಆತ್ಮನಾಗಬೇಕು. ಯಾಕೆಂದರೆ ಮನಸ್ಸಿಗೆ ಗಮನಾಗಮನಗಳೂ ಅವೆ,ಸ್ಥೂಲದೇಹದಲ್ಲಿ ಅಹಂಭಾವವೂ ಅದೆ, ಮತ್ತು ಸುಖದುಃಕದ ಜ್ಞಾನವೂ ಅದಕ್ಕಾಗುವುದು.

ಆದ್ದರಿಂದ ಮನಸ್ಸೇ ಆತ್ಮನೆಂಬುದು ನಿಶ್ಚಯವು" ಇದನ್ನು ಕೇಳಿ ಬೌದ್ಧ ಸಾಂಪ್ರದಾಯಕನು ಅನ್ನುತ್ತಾನೆ "ಬುದ್ಧಿ ಕರ್ತನಿಲ್ಲದಿದ್ದರೆ, ಮನೋರೂಪ ಕರಣವನ್ನು ಯಾರು ಪ್ರೇರಿಸುವರು ? ಬುದ್ಧಿಯೇ ಎಲ್ಲಾ ಕಾರ್ಯಗಳ ಕರ್ತೃವಾಗಿರುವುದರಿಂದ ಬುದ್ಧಿಯೇ, ಆತ್ಮಾ." ಆಗ ಭಟ್ಟಾಚಾರ್ಯನ ಶಿಷ್ಯನನ್ನುತ್ತಾನೆ, "ಬುದ್ಧಿಯು ನಿದ್ರಾಕಾಲದಲ್ಲಿ ಲಯ ಹೊಂದುವದು, ಮತ್ತು ಆನಂದ ಮಾತ್ರ ಉಳಿಯುವುದು. ಆದ್ದರಿಂದ ಆನಂದವೇ ಆತ್ಮಾ," ಇದನ್ನು ಕೇಳಿಶೂನ್ಯವಾದಿಯು "ನಿದ್ರಾಕಾಲದಲ್ಲಿ ನಮಗೇನು ಕಾಣುವುದಿಲ್ಲ. ಆದ್ದರಿಂದ ಆತ್ಮನು ನಾಸ್ತಿರೂಪನಿದ್ದಾನೆ' ಎಂದು ಅಂದದ್ದು ಕೇಳಿ ಸಿದ್ಧಾರೂಢರು, ಆತನಿಗೆ, 'ಆ ನಾಸ್ತಿತ್ವವನ್ನು ನೀನು ತಿಳಿದು ಹೇಳುತ್ತಿಯೊ, ತಿಳಿಯದೆ ಹೇಳುವಿಯೋ, ಶೂನ್ಯವಾದಿಯೇ ಹೇಳು. 'ನಾಸ್ತಿ' ತಿಳಿದು ಹೇಳುತ್ತಿಯಾದರೆ, ಅದನ್ನು ತಿಳಿಯುವ ನೀನು ಅಸ್ತಿರೂಪನಿದ್ದಿಯಲ್ಲ. "ಆತ್ಮನು ಅಸ್ತಿತ್ವದ ಖಣಿ" ಎಂದು ಶ್ರುತಿ ಹೇಳುವುದು. ಅರ್ಥಾತ್ ಬ್ರಹ್ಮರೂಪವಿರುವನು" ಎಂದು

ಹೇಳಿದರು. ಆಮೇಲೆ ಪ್ರಾರಬ್ಧವಾದಿಯು ಅನ್ನುತ್ತಾನೆ - "ಆತ್ಮ ಜ್ಞಾನಿಗಾದರೂ ಪ್ರಾರಬ್ಧವು ಬಿಡುವುದಿಲ್ಲ, ಕರ್ಮಾನುಸಾರ ಸುಖದುಃಖ ಕೊಡುವದು." ಇದನ್ನು ಕೇಳಿ, ಸಿದ್ಧಾರೂಢರು ಅನ್ನುತ್ತಾರೆ, "ಸುಖದುಃಖಗಳು ನೀನು ವಿಷಯಾತ್ಮಕ ಅನ್ನುವಿಯೋ ಮನೋವೃತ್ತಿ ರೂಪ ಎಂದು ಹೇಳುತ್ತಿಯೋ, ಪ್ರಥಮ ವಿಕಲ್ಪವನ್ನು ಸ್ವೀಕರಿಸಿದರೆ, ಅದು ಪೂರ್ಣ ಅಸಂಭವವಾಗುವದು. ಯಾಕಂದರೆ, ವಿಷಯ ಒಂದೆಯಾದರೂ, ಕಾಲ, ಸ್ಥಿತಿ ವ್ಯಕ್ತಿಗನುಸರಿಸಿ ಅದರೊಳಗೆ ಭೇದಗಳು ಸಿದ್ಧಿಸುತ್ತವೆ. ಪುರುಷನುನಿರೋಗಿ ಇರುವಾಗ ಯಾವ ವಿಷಯದಲ್ಲಿ ಸುಖ ತೋರುವದೋ, ಅದರಲ್ಲೆ ರೋಗ ಸಮಯದಲ್ಲಿ ಆತನಿಗೆ ದುಃಖ ಕಾಣುವದು. ಅದ್ದರಿಂದ ಸುಖದುಃಖಗಳು ವಿಷಯಾತ್ಮಕವಲ್ಲ. ಅವು ಮನೋವೃತ್ತಿರೂಪ ಎಂದರೆ, ಮನಸ್ಸಿನ ಧರ್ಮ ಮನಸ್ಸಿಗೆ ಬಾಧಿಸಬಾರದು. ಯಾಕಂದರೆ ಅಗ್ನಿಧರ್ಮವಾದ ಉಷ್ಣತೆಯು ಅಗ್ನಿಗೆ ತಾಪ ಕೊಡಲಾರದು." ಅದಕ್ಕೆ ಆ ವಾದಿಯು, "ಸುಖ ದುಃಖಗಳು ಮನಸ್ಸಿನ ಧರ್ಮಗಳಿದ್ದು, ಅವು ಆತ್ಮನನ್ನು ಯಾಕೆ

ಬಾಧಿಸಬಾರದು ?" ಎಂದು ಕೇಳಿದ್ದಕ್ಕೆ,ಸಿದ್ಧರಾಜರು ಅಂದದ್ದು - "ಸುಪ್ತಿ ಸಮಾಧಿಗಳೊಳಗೆ ಆತ್ಮನಿರುವನು, ಆದರೆ ಅಲ್ಲಿ ಮನಸ್ಸಿನ ಪ್ರವೇಶವಿಲ್ಲ. ಆದ್ದರಿಂದ ಮನಸ್ಸಿನ ಈ ಧರ್ಮಗಳು ಆತ್ಮಜ್ಞಾನಿಗೆ ಬಾಧಿಸಲಾರವು." ಆಗ ವಾದಿಯು ಅನ್ನುತ್ತಾನೆ- " "ನಾಭುಕ್ತಂಕ್ಷೀಯತೆ ಕರ್ಮ" ಎಂದು ಶ್ರುತಿ ವಚನ ಇರುವಾಗ, ಇದು ಜ್ಞಾನಿಗಳ ಸಂಬಂಧ ಅಪ್ರಮಾಣವಾಗುವದಲ್ಲ" ಎಂದು ಹೇಳಿದ್ದಕ್ಕೆಸಿದ್ಧರು, "ಈ ವಾಕ್ಯವು ಜ್ಞಾನಶೂನ್ಯರಾದ ಪಾಮರ ಜನರ ಸಲುವಾಗಿ ಕರ್ಮಭಯ ಹಾಕುವುದಕ್ಕಾಗಿ ಇರುವುದು. ಜ್ಞಾನಿಗಳಿಗೆ ಇದು ಸರ್ವಥಾ ಅಪ್ರಮಾಣವೇ ಸರಿ," ಎಂದು ಅನ್ನಲು ಸರ್ವರಿಗೂ ಆನಂದವಾಗಿ, "ಸಿದ್ಧಾರೂಢರು ಧನ್ಯರು, ಧನ್ಯರು," ಎಂದು ಚಪ್ಪಾಳೆಗೈದರು.

ಆ ದಿನ ಅಲ್ಲಿ ಇದ್ದು ಎರಡನೇ ದಿನ ಸಿದ್ಧನಾಥರು ತಿರುಪತಿ ಕ್ಷೇತ್ರಕ್ಕೆ ಹೋಗಿ ಶ್ರೀ ವೆಂಕಟೇಶನ ದರ್ಶನವನ್ನು

ತಕ್ಕೊಂಡರು. ಅಲ್ಲಿಂದ ಮುಂದೆ ದಾರಿ ನಡೆಯುತ್ತಾ

ಹೋಗುವಾಗ, ದೇಹಕ್ಕೆ ಅನೇಕ ದುಃಖಾದಿಗಳಿಂದ

ಬಾಧೆಯಾದರೂ, ಸಿದ್ಧಾರೂಢರು ಸ್ವಲ್ಪವಾದರೂ ಬ್ರಹ್ಮ ಚಿಂತನದಿಂದ ಚಲಿಸಲಿಲ್ಲ. ದೇಹದ ಮೇಲೆ ಒಂದು ಸಣ್ಣ ವಸ್ತ್ರ, ಭಿಕ್ಷೆಗೆ ಕರತಲವೇ ಪಾತ್ರೆ ಶಯೇಗೇ ಭೂಮಿಮಾತ್ರವೇ ಇರುತ್ತಿತ್ತು. ಜನರು ಈತನು ಉನ್ಮತ್ತನಿದ್ದಾನೆಂದು, ಆತನಿಗೆ ಕಲ್ಲು ಒಗೆಯುತ್ತಿದ್ದರು. ಕೆಲವರು ಇವರು ರೋಗದಿಂದ ಅಶಕ್ತನಾಗಿರುವನೆಂದು, ಇವರನ್ನು ಸಮೀಪ ಬರಗೊಡುತ್ತಿದ್ದಿಲ್ಲಾ. ಈತನ ಕುಲ ಗೊತ್ತಿಲ್ಲ, ಎಂದು ಇವರ ಸಂಸರ್ಗವನ್ನೆಲ್ಲಾ ಬಿಟ್ಟು ಬಿಡುತ್ತಿದ್ದರು. ಉತ್ತಮ ಅಧಿಕಾರಿಗಳ್ಯಾರಾದರೂ ಭೆಟ್ಟಿಯಾದರೆ, ಈತನು ಜ್ಞಾನಿ ಇರುವನೆಂದು ತಿಳಿಯುವರು. ಇವರ ನಿಸ್ಪೃಹ ವೃತ್ತಿ ಕಂಡು ಇವನು ಬ್ರಹ್ಮವೇತ್ತನೆಂಬುವದರಲ್ಲಿ ಸಂಶಯವಿಲ್ಲ, ಇವನ ಉಪಚಾರ ಮಾಡಿ ತಾವು ಧನ್ಯರಾಗಬೇಕೆಂದು, ಸಿದ್ದರನ್ನು ಮನೆಗೆ ಕರಕೊಂಡು ಹೋಗಿ, ಕೆಲವರುಸ್ನಾನಾದಿ ಉಪಚಾರಗಳಿಂದ ಪೂಜಿಸುತ್ತಿದ್ದರು. ಹೀಗೆ ಸಿದ್ಧರು ಸಂಚಾರ ಮಾಡುತ್ತಾ ಶಿವಕಂಚಿಗೆ ಹೋಗಿ, ಪರಶಿವನನ್ನು ಕಂಡು, ಅಲ್ಲಿಂದ ವಿಷ್ಣು ಕಂಚಿಗೆ ಹೋಗಿ ವರದರಾಜ ನೋಡಿದರು.

ದಾರಿಯಲ್ಲಿ ಒಬ್ಬ ಬ್ರಾಹ್ಮಣನು ಇವರನ್ನು ನೋಡಿ, ಈತನು ಜಡಭರತನಂಥಾ ಬ್ರಹ್ಮವೇತ್ತನಿರಬೇಕು, ಎಂದು ಅಂದುಕೊಂಡು ಸ್ವಾಮಿಯವರ ನಿಸ್ಪೃಹ ವೃತ್ತಿ ಮತ್ತು ಉನ್ಮತ್ತ ಚರ್ಯೆಯನ್ನು ಕಂಡು, ಇವರನ್ನು ಪೂಜಿಸಬೇಕೆಂದು ಹಸ್ತಗ್ರಹಣ ಮಾಡಿ ಸಿದ್ಧರನ್ನು ಮನೆಗೆ ಕರೆದುಕೊಂಡು ಹೋದನು. ಇವರ ಪೂಜೆಯಿಂದ ಮಹಾಫಲ ಉಂಟಾಗುವದೆಂದು ಆ ಬ್ರಾಹ್ಮಣನು ಸಿದ್ಧಾರೂಢರಿಗೆ ಯೋಗ್ಯವಾದ ಆಸನವನ್ನು ಕೊಟ್ಟು, ಸದ್ಭಾವದಿಂದ ಷೋಡಶೋಪಚಾರ ವಿಧಿವತ್ತಾಗಿ ಪೂಜಾ ಮಾಡಿದನು. ಆಮೇಲೆ ಸಮ್ಮುಖದಲ್ಲಿ ನಿಂತು, ಕೈಜೋಡಿಸಿ ನಯನುಡಿಗಳಿಂದ, “ಬ್ರಹ್ಮವೆತ್ತನ ಪೂಜಾದರ್ಶನಾದಿಗಳಿಂದ ತತ್ಕಾಲ ಫಲ ಉಂಟಾಗುವುದು” ಎಂದು ನುಡಿದನು. ಆಗ ಸಿದ್ಧ ಸದ್ಗುರುನಾಥರು, “ನೀನು ಯಾರು ಇದ್ದಿ, ಸತ್ಯವಾಗಿ ಹೇಳು” ಎಂದು ಕೇಳಿದ್ದಕ್ಕೆ, ಆತನು, “ಈ ದೇಹ ಏನು ಕಾಣುವುದೋ ಅದೇ ನಾನು” ಅಂದರು. ಅದಕ್ಕೆ ಸದ್ಗುರುಗಳು, “ಪಂಚಭೂತಾತ್ಮಕವಾದ ಈ ದೇಹವನ್ನು ಅವುಗಳಿಗೆ

ಹಂಚಿಕೊಟ್ಟ ಮೇಲೆ, ನೀನು ಉಳಿಯುವಿ. ಆಗ ನೀನು ಯಾರು ?" ಎಂದು ಕೇಳಲು, ಬ್ರಾಹ್ಮಣನು "ಪ್ರಾಣ ಬುದ್ಧಿಗಳ ಸಮೇತ ಅನೇಕ ಲೋಕಗಳಲ್ಲಿ ಸಂಚರಿಸುವವನೇ ನಾನು," ಎಂದು ಉತ್ತರ ಕೊಟ್ಟನು.ಅಮೇಲೆ ಸದ್ಗುರುನಾಥರು, "ಸುಪ್ತಿಯೊಳಗೆ ಬುದ್ಧಿಯು ಹೊಂದುವದು, ಆಗ ನೀನ್ಯಾರು ಇರುತ್ತಿ?" ಎಂದು ಕೇಳಿದ್ದಕ್ಕೆ "ನಾನರಿಯೆನು" ಎಂದು ಬ್ರಾಹ್ಮಣನು ಉತ್ತರ ಕೊಟ್ಟನು. ಆಗ್ಗೆ ಸಿದ್ಧಾರೂಢರು, "ಹೇ ವಿಪ್ರನೇ, ನಾನುತಿಳಿಯಲಾರೆ, ಎಂಬುದನ್ನು ನೀನು ನಿಶ್ಚಯವಾಗಿ ತಿಳಿಯುತ್ತಿ , ಆದರೆ ಅನ್ನಲಾರಿ; ಆ ಜ್ಞಾನರೂಪನೇ ನೀನಿದ್ದಿ" ಎಂದು ನುಡಿದಾಕ್ಷಣ ಗುರುಗಳ ಕೃಪಾಬಲದಿಂದ ಆ ಜ್ಞಾನರೂಪವನ್ನು ಆ ಬ್ರಾಹ್ಮಣನು ಅನುಭವಕ್ಕೆ ತಂದು, ಅನ್ನುತ್ತಾನೆ

"ಮಹಾತ್ಮರ ದರ್ಶನವು ನನಗೆ ದೃಷ್ಟಫಲದಾಯಕವಾಯಿತು," ಎಂದು ಸಿದ್ಧಾರೂಡರ ಚರಣಕ್ಕೆ ರಗಿದನು.

ಅನಂತರ ಸಿದ್ಧರು ಅಲ್ಲಿಂದ ಹೊರಟು ಸಂಚಾರ ಮಾಡುತ್ತ ಚಿದಂಬರಕ್ಕೆ ಬಂದು,ಅಲ್ಲಿಯ ರಹಸ್ಯಸ್ಥಾನವನ್ನು ಕಂಡರು. ಅಲ್ಲಿಂದ ಮುಂದೆ ಹೋಗುವಾಗ ಮಳೆಗಾಲವಿದ್ದು, ಮಳೆಯೇ ಅವರಿಗೆ ಸ್ನಾನ ಮಾಡಿಸುತ್ತಿತ್ತು. ಸೂರ್ಯಕಿರಣಗಳ ಮೈ ವಣಗಿಸುತ್ತಿದ್ದವು, ತಾವೇನೂ ಯತ್ನ ಮಾಡುತ್ತಿದ್ದಿಲ್ಲ. ಜನರೇ ಅನ್ನ ಕೊಟ್ಟು ದೇಹ ರಕ್ಷಿಸಬೇಕು. ದೇಹ ಚಿಂತೆಯೆಂಬುದು ಅವರಿಗೆ ಮನವರಿಕೆಯೇ ಇದ್ದಿಲ್ಲ. ಯಾರು ಪೂಜಿಸಿದರೂ, ಯಾರು ಹೊಡೆದರೂ, ಅವರು ಸಮಾನ ಭಾವದಿಂದಿರುತ್ತಿದ್ದರು. ಕುಂಭಕೋಣ ಕ್ಷೇತ್ರದಲ್ಲಿ ಕುಂಭೇಶ್ವರನ ದರ್ಶನ, ತಂಜಾವೂರಲ್ಲಿ ತಂಜೇಶ್ವರನ ದರ್ಶನ ಮಾಡಿಕೊಂಡು ಶ್ರೀರಂಗ ಕ್ಷೇತ್ರದ ಕಡೆಗೆ ಸಿದ್ಧರು ಹೋದರು. ದಾರಿಯಲ್ಲಿ ಒಬ್ಬ ಒಕ್ಕಲಿಗನು ಸಿದ್ಧರಿಗೆ ಕೇಳುತ್ತಾನೆ, "ನೀನು ಶವದಂತ ಕಾಣಿಸುವಿ,ಆದರೆ ವಾಯುವೇಗದಿಂದ ನಡೆಯುತ್ತಿ, ನೀನು ಪುಷ್ಟನಿದ್ದರೆ ಹ್ಯಾಗೆ ಓಡುತ್ತಿದ್ದಿ? " ಅದಕ್ಕೆ ಸಿದ್ಧರು, "ಅನ್ನದಿಂದ ಶಕ್ತಿ ಬರುವುದಿಲ್ಲ. ನಿರಂತರ ಬ್ರಹ್ಮಾಕಾರ ಮನೋವೃತ್ತಿ ಇರುವುದರಿಂದ ಶಕ್ತಿ ಬರುವುದು", ಎಂದು ಹೇಳಿ

ಮುಂದೆ ನಡೆದರು. ಶ್ರೀರಂಗನ ದರ್ಶನವನ್ನು ತಕ್ಕೊಂಡು, ಸಿದ್ಧರು ಜಂಬುಕೇಶ್ವರಕ್ಕೆ ಬಂದು, “ನೀನು ಚಂಡಾಲನು, ದೇವಾಲಯದೊಳಗೆ ಪ್ರವೇಶಿಸಬೇಡ", ಎಂದು ಪ್ರತಿಬಂಧಕಮಾಡಲು, ಸಿದ್ಧರು “ನಿನ್ನೊಳಗೆ ಕ್ರೋಧ ಚಾಂಡಲನು ಪ್ರವೇಶಿಸಿರುವನು" ಎಂದು ಅಂದಿದ್ದಕ್ಕೆ ಬ್ರಾಹ್ಮಣನು, ದಕ್ಷಿಣೆ ಕೊಟ್ಟರೆ ಒಳಗೆ ಬಿಡುವೆನು”, “ಹೀಗಂದಿದ್ದು ಕೇಳಿ, ಸಿದ್ಧರು, “ನೋಡು ಸಂಕಲಿತ ಚಾಂಡಾಲನೂ ನಿನ್ನಲ್ಲಿ ಪ್ರವೇಶಿಸಿದನು. ಹೀಗೆ ಒಬ್ಬ ಚಾಂಡಲನನ್ನು ಹೊರಗೆ ಕಳುಹಿಸಲಿಕ್ಕೆ ನೋಡಿ, ಮೂರು ಮಂದಿ ಚಾಂಡಾಲರನ್ನು ಒಳಗೆ ಕರಕೊಂಡಿ,” ಎಂದು ಸಿದ್ಧರಂದದ್ದು ಕೇಳಿ, ಆ ಬ್ರಾಹ್ಮಣನುಗಡಬಡಿಸಿ, ಗಾಬರಿಯಾಗಿ, “ನಿನ್ನ ಕೂಡ ಮಾತಾಡುತ್ತಾ ಇದ್ದು, ನನ್ನ ಸ್ನಾನ ಸಂಧ್ಯಾದಿಗಳನ್ನು ಮರೆತೆನು ”, ಎಂದನ್ನುವದನ್ನು ಕೇಳಿ, ಸಿದ್ಧರು “ಇಗೋ ಕರ್ಮಭ್ರಷ್ಟ ಚಾಂಡಾಲನು ಈಗ ನಿನ್ನಲ್ಲಿ ಪ್ರವೇಶಿಸುವನು", ಎಂದು ಅಂದರು. ಇದನ್ನು ಕೇಳಿ, ಆ ಬ್ರಾಹ್ಮಣನು ಅನುತಾಪಯುಕ್ತನಾಗಿ 'ತ್ರಾಹಿ, ತ್ರಾಹಿ

ಅಪರಾಧವಾಯಿತು. ಮಹಾತ್ಮರಿಗೆ ಛಳನ ಮಾಡಿದೆನು',ಎಂದು ನುಡಿದು ಸಿದ್ಧಾರೂಢರ ಚರಣಗಳಿಗೆರಗಿದನು. ಅನುತಾಪಯುಕ್ತನಾಗಿ ಬ್ರಾಹ್ಮಣನು ಎದ್ದು, ಸಿದ್ಧರ ಆಜ್ಞೆಪಡಕೊಂಡು ತನ್ನ ಗೃಹಕ್ಕೆ ತೆರಳಿದನು. ಶ್ರೀ ಸದ್ಗುರು ಸಿದ್ಧಾರೂಢರು ಮೀನಾಕ್ಷಿ ದೇವಾಲಯದೊಳಗೆ ಪ್ರವೇಶಿಸಿ, ದೇವಿಯ ದರ್ಶನವನ್ನು ತಕ್ಕೊಂಡು, ಹೊರಗೆ ಬಂದು ನದಿಯ ತೀರಕ್ಕೆ ಹೋಗಿ ಅಲ್ಲಿ ಆಸನವನ್ನು ಹಾಕಿ ಸ್ವಸ್ಥ ಧ್ಯಾನದಲ್ಲಿ ಮಗ್ನರಾಗಿ ಕೂತುಬಿಟ್ಟರು. ಆ ಬ್ರಾಹ್ಮಣನು ತನ್ನ ಮನೆಗೆ ಹೋದಾಕ್ಷಣ, ಆತನಿಗೆ ಸಿದ್ಧಾರೂಢ ಮಹಾತ್ಮರ ಸ್ಮರಣೆಯಾಗಿ, ಮಹಾತ್ಮನನ್ನು ಮನೆಗೆ ಕರಕೊಂಡು ಬಂದು ನೈವೇದ್ಯ ಅರ್ಪಿಸಬೇಕು, ಎಂದು ಮನದೊಳಗೆ ಅಂದುಕೊಂಡು, ಅವಧೂತರನ್ನು ಹುಡುಕುತ್ತ ಹುಡುಕುತ್ತ ನದೀ ತೀರಕ್ಕೆ ಬರಲು, ಅಲ್ಲಿ ಆಸನ ಹಾಕಿ ಕೂತಿರುವ ಮಹಾತ್ಮನನ್ನು ಕಂಡು ಅವರಿಗೆ ಸಾಷ್ಟಾಂಗ ನಮನ ಮಾಡಿ, "ಮಹಾರಾಜರೆ, ಇವತ್ತು ನೈವೇದ್ಯಕ್ಕೆ ನಮ್ಮ ಮನೆಗೆ ಬರಬೇಕು", ಎಂದು ಪ್ರಾರ್ಥಿಸಿದನು. ಸಿದ್ಧ ಸದ್ಗುರುಗಳು

ಆತನನ್ನು ನೋಡಿ, “ಹೇ ಬ್ರಾಹ್ಮಣವರ್ಯನೇ, ನಮ್ಮನ್ನು ನಡೆಸಿಕೊಂಡು ನಿಮ್ಮ ಮನೆಗೆ ಕರೆದೊಯ್ದು ಉಣ್ಣಿಸುವದರಿಂದ ನಿಮಗೆ ಅಲ್ಪ ಪುಣ್ಯವು ಬರುವದು. ನೈವೇದ್ಯ ಅನ್ನವನ್ನು ಇಲ್ಲಿಗೇನೇ ತಕ್ಕೊಂಡು ಬಂದಿರಾದರೆ ನಿಮಗೆ ಪೂರ್ಣಫಲ ಉಂಟಾಗುವದು", ಎಂದು ನುಡಿದರು. ಮಹಾತ್ಮರ ಈ ಭಾಷಣವನ್ನು ಕೇಳಿ ಆ ಬ್ರಾಹ್ಮಣನು ಆನಂದಭರಿತನಾಗಿ ತೀವ್ರ ಮನೆಗೆ ಹೋಗಿ, ನೈವೇದ್ಯ ತಕ್ಕೊಂಡು ಬಂದು, ಮಹಾನುಭಾವರ ಮುಂದಿಟ್ಟನು. ಅದನ್ನು ಸೇವಿಸಿ, ಸಿದ್ದರು .ಆ ಬ್ರಾಹ್ಮಣನನ್ನು ಆಶೀರ್ವದಿಸಿ ಮನೆಗೆ ಕಳುಹಿಸಿ ತಾವು ಅಲ್ಲೇ ಮಳಲಲ್ಲಿ ಶಯನ ಮಾಡಿದರು. ಅಲ್ಲಿಂದ ಎದ್ದು ರಾಮೇಶ್ವರಕ್ಕೆ ಹೋಗಿ, ಮುಂದೆ ರಾಮಝುರಕೆಯಲ್ಲಿ ಒಬ್ಬ ಯೋಗೀಶ್ವರನನ್ನು ಕಂಡು, ಅವನನ್ನು ಕುರಿತು, "ಮಹನೀಯರೇ, ನಿಮಗೆ ಯಾವ ಅಂಗ ಸಿದ್ಧವಾಗಿದೆ" ಎಂದು ಕೇಳಲು, ಆತನು “ದೇಹಲಾಘವತ್ವದಿಂದಲೂ ದೇಹಾರೋಗ್ಯದಿಂದಲೂ, ಆಸನಾಂಗ ಒಂದು ಸಿದ್ಧಿಸಿದೆ, ಎಂದು ನಾನು ತಿಳಿಯುತ್ತೇನೆ" ಅಂದನು. ಇದನ್ನು ಕೇಳಿ ಸಿದ್ಧರು

ಸಂತೋಷಪಟ್ಟು,ಧನುಷ್ಕೋಟಿಗೆ ಹೋಗಿ, ಅಲ್ಲಿ ಸ್ನಾನ ಮಾಡುವವನೊಬ್ಬನನ್ನು ಕಂಡು "ನೀನು ದೇಹ ಸ್ವಚ್ಛಯೆಂದು ಸ್ನಾನಮಾಡುತ್ತೀಯೋ ಅಸ್ವಚ್ಛವೆಂದು ಮಾಡುವಿಯೋ?" ಎಂದು ಕೇಳಲು, ಅವನು "ದೇಹ ಅಸ್ವಚ್ಛವೆಂದು ಸ್ನಾನ ಮಾಡುತ್ತೇನೆ" ಅಂದನು. ಆಗ ಸಿದ್ದರು, "ಅಸ್ವಚ್ಚವೆಂದು ಹ್ಯಾಗೆ ತಿಳಿಯಿತು", ಎಂದು ಕೇಳಲು, ಆತನು "ಜಾತಕರ್ಮಾದಿ ಸಂಸ್ಕಾರಗಳಿಂದ

ತಿಳಿಯಿತು", ಅಂದನು. ಈತನು ಮೂರ್ಖನಿದ್ದಾನೆಂದು ಸಿದ್ದರು ತಿಳಿದುಕೊಂಡು ಮುಂದಕ್ಕೆ ನಡೆದರು. ಅಲ್ಲಿಂದ ತಿರ್ನಲವೇಲಿಗೆ ಸಿದ್ಧಾರೂಢರು ಹೋಗಿ, ತಿರ್ನಲಸ್ವಾಮಿಯ ದರ್ಶನ ತಕ್ಕೊಂಡು ಅಲ್ಲಿ ಧ್ಯಾನಸ್ಥರಾಗಿ ಕೂತಿರುವ ಒಬ್ಬನನ್ನು ಕಂಡು ಆತನನ್ನು ಕುರಿತು, "ಈ ಉಪಾಸನೆಯು ಜ್ಞಾತವೋ? "ಜನತೋಪಾಸನೆಯೆಂದರೆ ಅದರೊಳಗೆ ದ್ವೈತವಿರಲಾರದು, ಮತ್ತು ಧಾತೃ ಧ್ಯಾನ ಧ್ಯೆಯದೊಳಗೆ ಐಕ್ಯವಾಗುವದರಿಂದ, ಧ್ಯಾನವು ಘಟಿಸದು. ಅಜ್ಞಾತೋಪಾಸನೆ ಎಂದನ್ನುವಿಯಾದರೆ, ಧಾತೃಸ್ಥಿತಿಯನ್ನು ತಿಳಿಯದೆ,

ಧ್ಯೇಯವನ್ನು ಅರಿಯದೆ ಧ್ಯಾನ ಹ್ಯಾಗೆ ಸಂಭವಿಸುವುದು ?" ಎಂದುಕೇಳಲು, ಆತನು, "ಅಪರೋಕ್ಷ ಜ್ಞಾನಕ್ಕೆ ಭಿನ್ನವಾದ ಶಾಸ್ತ್ರಾಪರೋಕ್ಷದಿಂದ ನಾನು ಧ್ಯಾನವನ್ನು ಮಾಡುತ್ತೇನೆ. ಅದಕ್ಕೆ ನಿಶ್ಚಲವಾದ ಶ್ರದ್ದೆಯೇ ಕಾರಣವು" ಅನ್ನಲು, "ಯಾತಕ್ಕೆ" ಎಂದು ಸಿದ್ದರು ಕೇಳಲಾಗಿ, ಅವನಂದನು, "ಶಾಸ್ತ್ರಜ್ಞರು ದೇವತಾ ಶ್ರದ್ಧಾಹೀನರಾಗಿರುವದರಿಂದ ಧ್ಯಾನದಲ್ಲಿ ಪ್ರವರ್ತರಾಗುವದಿಲ್ಲ. ಆದರೆ ಉಪಾಸಕರಿಗೆ ಶ್ರದ್ಧೆಯೇಮುಖ್ಯವಾಗಿರುವುದೆ" ಇದನ್ನು ಕೇಳಿ, ಈತನು ಸಾಂಪ್ರದಾಯಿಕನಿರುವನು, ಎಂದು ತಿಳಿದುಕೊಂಡು ಸಿದ್ದರು ಅಲ್ಲಿಂದ ತೋತಾದ್ರಿ ಕ್ಷೇತ್ರಕ್ಕೆ ನಡೆದರು. ಅಲ್ಲಿ ನಾರಾಯಣಮೂರ್ತಿಯ ದರ್ಶನವನ್ನು ತಕ್ಕೊಂಡು ಮುಂದೆ ತಿರಕರಾನ ದೇವಾಲಯದಲ್ಲಿ ಕಂಚಿ ನಾರಾಯಣನ ದರ್ಶನವನ್ನು ತಕ್ಕೊಂಡು, ಒಂಬತ್ತುದಿನ ಸಿದ್ಧಾರೂಢರು ಅಲ್ಲೇ ಉಳಿದರು. ಅಲ್ಲಿ ಶಾಸ್ತ್ರಿಗಳು ಬಂದು ಸ್ವಾಮಿಯವರಿಗೆ ವಿಚಾರಿಸುತ್ತಾರಲ್ಲ, "ನೀವು ಸ್ನಾನಾದಿಕರ್ಮಗಳನ್ನು ಯಾತಕ್ಕೆ ಮಾಡಲೊಲ್ಲಿರಿ?" ಎಂಬುದಕ್ಕೆ ಸಿದ್ಧಾರೂಢರು,

“ಕರ್ಮಾಚರಣವನ್ನು ವಿಧಿಯುಕ್ತಮಾಡುವದರಿಂದ, ಅದು ಜೀವನವನ್ನು ಉತ್ತಮ ಲೋಕಕ್ಕೆ ಒಯ್ಯುವುದು. ಆದರೆ ಪುಣ್ಯಕ್ಷಯವಾದ ಕೂಡಲೇ ಆತನು ಪುನಃ ಕರ್ಮವಾಸನೆ ಹಿಡಿದು ಈ ಲೋಕಕ್ಕೆ ಬರುವನು. ಈ ಪ್ರಕಾರ ಅನೇಕ ಯತಾಯತಿಗಳನ್ನು ಭೋಗಿಸಿ, ಜೀವನು ಬಹಳ ತಾಪಹೊಂದಿ, ಕರ್ಮ ಬಂಧದಿಂದ ನಿವೃತ್ತಿಯಾಗುವ ಉಪಾಯವನ್ನು

ಹುಡುಕುವನು. ಎಲ್ಲಿವರೆಗೆ ಜೀವನು ಕರ್ಮಕ್ಕೆ ಬೇಸರಪಡಲಿಲ್ಲ, ಅಲ್ಲಿ ತನಕ ವೇದಗಳು ಆತನಿಗೆ ಕರ್ಮವನ್ನು ವಿಧಿಸುವವು. ವೈರಾಗ್ಯಗ್ನಿಯು ಯಾವಾಗ್ಗೆ ಪ್ರಜ್ವಲಿಸುವದೋ ಆಗ ಶ್ರುತಿಗಳು ಆತನಿಗೆ ನಿವೃತ್ತಿಯನ್ನು ತೋರಿಸುವವು. ಮುಮುಕ್ಷು ದೆಶೆಯಲ್ಲಿಯೇ ಕರ್ಮ ಬಿಟ್ಟಿರುವಾಗ, ಸಿದ್ಧಸ್ಥಿತಿಯುಳ್ಳವನಿಗೆ ಈ ಪ್ರಶ್ನೆಯು ಸಲ್ಲದು”, ಎಂದು ಸಿದ್ಧರು ಉತ್ತರ ಕೊಡಲು, ಶಾಸ್ತ್ರಿಗಳು ದೈನ್ಯಭಾವದಿಂದ ಸಿದ್ಧರಿಗೆ ನಮಸ್ಕರಿಸಿ, ಸ್ವಸ್ಥಾನಕ್ಕೆ ತೆರಳಿದರು. ಹೀಗೆ ಎಲ್ಲೆಲ್ಲಿ ಸಿದ್ಧಾರೂಢರು ಹೋಗುವರೋ ಅಲ್ಲಲ್ಲಿ ಜನರಿಗೆ

ವೇದಾಂತಮಾರ್ಗವನ್ನು ಉಪದೇಶಿಸುತ್ತಿದ್ದರು. ಸದ್ಗುರುನಾಥನು ದರ್ಶನ ಮಾತ್ರದಿಂದ ಜೀವನನ್ನು ಕರ್ಮಬಂಧದಿಂದ ನಿರ್ಮುಕ್ತನನ್ನಾಗಿ ಮಾಡುವನು. ಜೀವರಿಗೆ ನಿರ್ಭಯವಾದಂಥಾ ಮಾರ್ಗವನ್ನು ಆತನು ತೋರಿಸುವನು. ಅದನ್ನು ಹಿಡಿದು ಅವರು ವಾಸನಾಕ್ಷಯವನ್ನು ಹೊಂದಿ ದುಃಖರಹಿತರಾಗುವರು. ಇಂತೆಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣಮಾತ್ರದಿಂದ ಸರ್ವಪಾಪಗಳನ್ನು ಭಸ್ಮಮಾಡುವಂಥ ಈ ಐದನೇ ಅಧ್ಯಾಯವನ್ನು ಶ್ರೀ ಸದ್ಗುರು ಸಿದ್ಧಾರೂಢರ ಚರಣಾರವಿಂದಗಳಲ್ಲಿ ಶಿವದಾಸನು ಅರ್ಪಿಸಿರುವನು.